

ಅತೀ ಹತ್ತಿರದಲ್ಲಿದ್ದು ಒಮ್ಮೆಲೇ ಅವಳ ಮುಂಗೈಯನ್ನು ಮೇಲೆತ್ತಿ ಮೃದುವಾಗಿ ಚುಂಬಿಸಿದ. ಇವಳ ಮೈಯ್ಯ ರಕ್ತ ಹೆಪ್ಪುಗಟ್ಟಿದಂತಾಯ್ತು. ಕಾಲುಗಳು ಒಮ್ಮೆಲೇ ಆಯಾಸದಿಂದೆಂಬಂತೆ ನಿಧಾನಗೊಂಡವು. ದೇಹದ ತೋಲ ತಪ್ಪದಂತಾಯ್ತು. ''ಸ್ಸಾರಿ, ನಾನು ಕುಳಿತುಕೊಳ್ಳುತ್ತೇನೆ'' ಎನ್ನುತ್ತ ಅವಳು ಅವನಿಂದ ದೂರ ಸರಿದಳು. ಕಾಲುಗಳನ್ನು ಪ್ರಯಾಸದಿಂದ ಎತ್ತಿಡುತ್ತ ಬಂದು ಕುರ್ಚಿಗೆ ಒರಗಿದಳು. ಅವಳ ಪಾಲಿಗೆ ಇಡೀ ಭೂಮಿ ಗಿರಗಿರ ತಿರುಗಿದಂತಾಗಿ ಕಣ್ಮುಚ್ಚಿದಳು.

ಇಂದಿಗೆ ಎಷ್ಟು ವರ್ಷವಾಯ್ತು?... ಇಪ್ಪತ್ತೆಂಟು, ಊಹೂಂ ಸರಿಯಾಗಿ ಇಪ್ಪತ್ತೊಂಬತ್ತು ವರ್ಷಗಳ ಕೆಳಗೆ ಮದುವೆಯಾದಂದಿನಿಂದ ಇಂದಿನ ವರೆಗೆ ಅವಳಿಗೆ ಗೊತ್ತಿದ್ದಿದುದು ಬರೀ ಸಂದೇಶನ ಕೈ ಸ್ಪರ್ಶ ಹಾಗೂ ಮೈ ಸ್ಪರ್ಶ. ಅವನದೊಂದೇ ಉಸಿರು ಇಷ್ಟು ಹತ್ತಿರ ಬಂದಿದ್ದು. ಅವನ ಕೈಗಳು ಮಾತ್ರ ಅವಳ ಸೊಂಟವನ್ನು ಬಳಸಿದ್ದವು, ಮತ್ತು ಅವನು ಮಾತ್ರ ತನಗೆ ಮುತ್ತು ಕೊಟ್ಟಿದ್ದನು. ಹಾಗೆ ಅವನು ಪ್ರೀತಿಯಿಂದ ಮುತ್ತು ಕೊಟ್ಟು ಎಷ್ಟೊಂದು ವರ್ಷಗಳಾದವು? ಎಲ್ಲಿ ನೆನಪಿರುತ್ತೆ ಎಲ್ಲವೂ? ಆದರೂ ತನಗೆ ನೆನಪಿನಲ್ಲಿ ಉಳಿಯುವಷ್ಟು ಹತ್ತಿರ ಇತ್ತಿತ್ತಲಾಗಿ ಅವನೆಂದೂ ತನ್ನನ್ನು ಅಪ್ಪಿ ಮುತ್ತಿಟ್ಟಲ್ಲ ಎನ್ನುವ ಸತ್ಯ ಅಂಥ ಚಳಿಯಲ್ಲಿ ಶಾಲೂವನ್ನು ಇನ್ನಷ್ಟು ಕೊರೆದು, ಗೀರಿ ಗಾಯ ಮಾಡಿತು. ಅಧರಗಳು ಕಂಪಿಸುತ್ತಿದ್ದವು. ಮುತ್ತಿಗೆ ಅನಾಮತ್ತಾಗಿ ತುತ್ತಾಗಿ ಕೆಂಪೇರಿದ ಮುಂಗೈ ಕೂಡ ನಡುಗುತ್ತಿತ್ತು.